1992ರ ಪ್ರಶಸ್ತಿ ಪಡೆದವರು

ಡಾ॥ ಎಸ್.ಕೆ. ಕರೀಂ ಖಾನ್

ವಿಶೇಷ ಪ್ರಶಸ್ತಿ

ಅರಬ್ ಮೂಲದ ತಾಯಿ, ಅಫ್ಘನ್ ಯೋಧ ತಂದೆಯನ್ನು ಪಡೆದ ಡಾ॥ ಎಸ್.ಕೆ. ಕರೀಂಖಾನ್ ಹುಟ್ಟು ಬೆಳೆದುದು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ. ತಂದೆಯನ್ನು ಕಳೆದುಕೊಂಡು ಅಣ್ಣನ ಆಶ್ರಯದಲ್ಲಿ 8ನೇ ತರಗತಿಯವರೆಗೆ ಮಾತ್ರ ಓದು ಪಡೆದ ಕರೀಂಖಾನ್ ವಿಶೇಷವಾಗಿ ಕಲಿತದ್ದು ಸಂಸ್ಕೃತವನ್ನು. ಆದರೆ ಹಳ್ಳಿಯ ಸಂಸ್ಕೃತಿ ಮತ್ತು ಸಾಹಿತ್ಯ ಅವರನ್ನು ಕೈಬೀಸಿ ಕರೆದುದರಿಂದ ಅದನ್ನು ಸಂಗ್ರಹಿಸುತ್ತಾ ಹಾಡುತ್ತಾ ಹಳ್ಳಿ ಹಳ್ಳಿ ಸುತ್ತಿದರು. ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕರೀಂಖಾನರಂಥ ಕಂಚಿನ ಕಂಠದ ಗಾಯಕರೊಬ್ಬರು ಈ ಹೋರಾಟ್ಟಗಾರರಿಗೆ ಬೇಕಾಗಿದ್ದರು. ಕರೀಂಖಾನ್ ತಮ್ಮ ಅದ್ಭುತ ಕಂಠದಿಂದ ಹಾಡುತ್ತಾ,ನಿರರ್ಗಳವಾಗಿ ಹರಿಯುವ ತಮ್ಮ ವಾಗ್ಝರಿಯಿಂದ ಜನರನ್ನು ಹುರಿದುಂಬಿಸುತ್ತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮಿಕಿದುದರ ಫಲವಾಗಿ ಒಂದಾದ ಮೇಲೊಂದರಂತೆ ಏಳು ಸಲ ಜೈಲುವಾಸ ಅನುಭವಿಸಿದರು. ಸ್ವಾತಂತ್ರ್ಯಾ ನಂತರ ಕರ್ನಾಟಕವನ್ನು ಒಂದು ರಾಜ್ಯವನ್ನಾಗಿ ಮಾಡುವ ಸಲುವಾಗಿ ಮತ್ತೆ ಏಕೀಕರಣ ಚಳುವಳಿಗೆ ಧುಮಿಕಿದರು. ಆಗಲೂ ಸೆರೆವಾಸ ಅನುಭವಿಸಿದರು. ಸ್ವಾತಂತ್ರ್ಯ ಸಂಗ್ರಾಮ, ಏಕೀಕರಣ ಚಳುವಳಿಗಳ ಕಾಲದಲ್ಲಿ ಯೋಧರಾಗಿದ್ದವರೇ ನಂತರ ನಾಯಕ ಮಣಿಗಳಾದರು. ಆಗ ಖಾನರ ಒಡನಾಡಿಗಳಾಗಿದ್ದವರು ಮುಖ್ಯ ಮಂತ್ರಿಗಳೂ ಆದರು. ತಮ್ಮ ಹೋರಾಟಗಳಿಗೆಲ್ಲ ಹಾಡು ಮತ್ತು ಮಾತುಗಳಿಂದ ಜೀವ ತುಂಬುತ್ತಿದ್ದ ಖಾನರನ್ನು ಮರೆತೇಬಿಟ್ಟರು. ಆ ವೇಳೆಗಾಗಲೇ ಐವತ್ತು ದಾಟಿ ಒಂಟಿಯಾಗಿ ಸ್ವಾಭಿಮಾನಿಯಾಗಿದ್ದ ಖಾನರು ಇವರ್ಯಾರೂ ತಮಗೆ ಪರಿಚಯವೇ ಇಲ್ಲವೇನೋ ಎಂಬಂತೆ ಸೀದಾ ಮದರಾಸಿನ ಸಿನಿಮಾ ಜಗತ್ತಿನಲ್ಲಿ ಅದೃಷ್ಟ ಹುಡುಕ ಹೊರಟರು.

'ನಟವರ ಗಂಗಾಧರ' ದಂಥ ಭಕ್ತಿ ಪ್ರಧಾನ ಗೀತೆಗಳಿಂದ ಹಿಡಿದು 'ಬಾರೆನೀ ಚೆಲುವೆ' ಯಂಥ ಶೃಂಗಾರಸದ ಹಾಡುಗಳವರೆಗೆ ಬರೆದ ಎಷ್ಟೋ ಮಧುರ ಮತ್ತು ಜನಪ್ರಿಯ ಗೀತೆಗಳನ್ನು ಕಟ್ಟಿದ್ದವರು ಬೇಕಾದಷ್ಟು ಜನ. ಹಾಗೆಯೇ ಕಥೆಗಳನ್ನು ಇವರ ಬಾಯಿಂದ ಕೇಳಿ ಊಟ ಕೊಡಿಸಿ ಸುಮ್ಮನಾದವರು ಎಷ್ಟೋ ಮಂದಿ. ಇವರು ಬರೆದ ಸಂಭಾಷಣೆಗಳನ್ನು ಕದ್ದು ಕಾಟಾಚಾರಕ್ಕೆ ಒಂದಿಷ್ಟು ಹಣ ಕೊಟ್ಟವರು ಅನೇಕ ಮಂದಿ. ಹೀಗೆ ರಾಜಕೀಯ ಹಾಗೂ ಸಿನಿಮಾ ಜಗತ್ತಿನ ಅತಿರಥರಿಂದ ಸಾಕಷ್ಟು ನೊಂದು ಬೆಂಗಳೂರು ಸೇರಿದ ಕರೀಂ ಖಾನರಿಗೆ ಇಂದಿಗೂ ನಿಲ್ಲಲು ನೆಲೆಯೆಂಬುದಿಲ್ಲ. ಹಸುವಿನಂಥ ಮುಗ್ಧ ಮನಸ್ಸಿನ ಕರೀಂಖಾನರನ್ನು ಸರ್ಕಾರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರನ್ನಾಗಿ ನೇಮಿಸಿದಾಗ ಮೂಗು ಮುರಿದವರು ಎಷ್ಟೋಜನ. ಇದರ ವಾಸನೆ ಗ್ರಹಿಸಿದ ಖಾನರು ನೇಮಕಾದೇಶ ಕೈಸೇರುವ ಮೊದಲೇ ರಾಜೀನಾಮೆ ಪ್ರಕಟಿಸಿಬಿಟ್ಟರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಇಂಥ ಅಪರೂಪ ಉದಾಹರಣೆ ಇನ್ನೊಂದಿರಲಾರದು. ಆದರೂ ಸರ್ಕಾರ ಇವರನ್ನು ಒಪ್ಪಿಸಿ ಅಧಿಕಾರ ಸ್ವೀಕರಿಸುವಂತೆ ಮಾಡಿದುದರ ಸಲುವಾಗಿ ಗಿರಿಜನರ ಮತ್ತು ಬುಡಕಟ್ಟು ಜನಾಂಗದ ಸಮಗ್ರ ವಿಡಿಯೋ ಚಿತ್ರೀಕರಣದಿಂದ ಕಣ್ಮರೆಯಾಗುವಂತಿದ್ದ ಸಂಸ್ಕೃತಿಯೊಂದು ಉಳಿಯುವಂತಾಯಿತು. ನಾಡಿನಾದ್ಯಂತ ಸಂಚರಿಸಿ ಕಲಾಮೇಳಗಳನ್ನು ವಿಚಾರ ಸಂಕಿರಣಗಳನ್ನು ಮಾಡಲಾಯಿತು. ಬಸವನಗುಡಿಯ ಚಿಕ್ಕ ಹೋಟೆಲೊಂದರ ಸಣ್ಣ ಕೋಣೆಯಲ್ಲಿ ಸಂತನಂತೆ ಬದುಕುತ್ತಿರುವ ಕರೀಂಖಾನ್ ಸಾಹಿತ್ಯ, ಸಂಸ್ಕೃತಿ, ಜಾನಪದ ಮತ್ತು ಸಿನಿಮಾಕ್ಕೆ ಕೊಟ್ಟದ್ದು ಬಹಳ ಆದರೆ ಪಡೆದದ್ದು ಕಡಿಮೆ.

ಡಾ॥ ಚಂದ್ರಶೇಖರ ಕಂಬಾರ

ಜಾನಪದ ತಜ್ಞ

ಡಾ. ಚಂದ್ರಶೇಖರ ಕಂಬಾರರು ಬೆಳಗಾವಿಜಿಲ್ಲೆಯ ಘೋಡಗೇರಿ ಹಳ್ಳಿಯ ಬಡಕುಟುಂಬದಲ್ಲಿ ಹುಟ್ಟಿ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದಂಥ ವಿದ್ವಾಂಸರು ಬರ್ಲಿನ್, ಮಾಸ್ಕೊ, ನ್ಯೂಯಾರ್ಕ್, ಚಿಕಾಗೋ ಮುಂತಾದ ಕಡೆ ಭಾರತೀಯ ರಂಗಭೂಮಿ ಹಾಗೂ ಜಾನಪದದ ಬಗ್ಗೆ ವಿಶೇಷೋಪನ್ಯಾಸಗಳನ್ನು ನೀಡಿದ ಕಂಬಾರರು ತಮ್ಮ 'ಸಾವಿರದ ನೆರಳು' ಕವನ ಸಂಕಲನಕ್ಕೆ ಕೇರಳದ ಕುಮಾರನ್ ಆಶಾನ್ ಪ್ರಶಸ್ತಿಯನ್ನು ಪಡೆದವರು. ತಮ್ಮ ನಾಟಕಗಳ ರಂಗ ಪ್ರಯೋಗದಲ್ಲಿ ತಾವೇ ಸೂತ್ರಧಾರರಾಗಿ 'ಜೋಕುಮಾರಸ್ವಾಮಿ' ನಾಟಕಕ್ಕೆ ಪ್ರತಿಷ್ಠಿತ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿಯನ್ನು ಗೆದ್ದವರು. ಹಂಪೆಯ ಕನ್ನಡ ವಿಶ್ವವಿದ್ಯಾನಿಲಯ ಮೊದಲ ಕುಲಪತಿಯಾದ ಕೀರ್ತಿ ಇವರದು. ಕನ್ನಡ ಸಾಹಿತ್ಯ ಪರಿಷತ್ತು ಸಿದ್ಧಪಡಿಸಿದ 'ಕನ್ನಡ ಜಾನಪದ ವಿಶ್ವಕೋಶ'ದ ಸಂಪಾದಕರಾದ ಇವರು ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಉಪಾಧ್ಯಕ್ಷರೂ ಆಗಿದ್ದರು. ಏಕಕಾಲದಲ್ಲೇ (1980-83) ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಗಳ ಸದಸ್ಯರಾಗಿದ್ದ ಇವರು ದೆಹಲಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರೂ ಆಗಿದ್ದರು. ಮೈಸೂರಿನ ರಂಗಾಯಣದ ಕರ್ನಾಟಕ ನಾಟಕ ರೆಪರ್ಟರಿಯ ಸದಸ್ಯರಾಗಿದ್ದ ಒಂದು ಅವಧಿಗ (1983-87) ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು.

ತಮ್ಮ 'ಜೈಸಿದ ನಾಯ್ಕ' ನಾಟಕಕ್ಕೆ ವರ್ಧಮಾನ ಪ್ರಶಸ್ತಿಯನ್ನು 'ಸಿರಿಸಂಪಿಗೆ' ನಾಟಕಕ್ಕೆ ಮತ್ತು 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಕಂಬಾರರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿ ಲಭ್ಯವಿದೆ. ನಾಟಕ ರಂಗಗಳಲ್ಲಿ ಸಲ್ಲಿಸಿದ ಸೇವೆಗಾಗಿ ಕೆ.ವಿ.ಶಂಕರೇಗೌಡ ರಂಗ ಪ್ರಶಸ್ತಿ ಲಭ್ಯವಾಗಿದ್ದರೆ 'ಕಾಡುಕುದುರೆ' ಸಿನಿಮಾಕ್ಕೆ ರಾಷ್ಟ್ರೀಯ ಪ್ರಶಸ್ತಿ ಲಭ್ಯವಾಗಿದ. ಇವರ ಬಹುಮುಖ ಪ್ರತಿಭೆಗೆ ಮತ್ತು ಸೇವೆಗಾಗಿ ಕ.ಸಾ. ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕಲ್ಕತ್ತಾದ ಪ್ರತಿಷ್ಠಿತ ನಂಬಿಕರ್ ಪ್ರಶಸ್ತಿಗಳು ಬಂದು ಮಡಿಲು ತುಂಬಿವೆ. 5 ಸಿನಿಮಾಗಳನ್ನು 8 ಸಾಕ್ಷ್ಯ ಚಿತ್ರಗಳನ್ನು ನಿರ್ದೇಶಿಸಿರುವ ಕಂಬಾರು 6 ಸಿನಿಮಾಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಉತ್ತಮ ನಿರ್ದೇಶಕ ಉತ್ತಮ ಕಥಾ ಲೇಖಕ, ಉತ್ತರ ಸಂಭಾಷಣೆಗಾರರರು ಹಾಗೂ ಉತ್ತಮ ಸಂಗೀತ ಸಂಯೋಜಕ ಪ್ರಶಸ್ತಿಗಳನ್ನು ಪಡೆದ ಇವರು 6 ಕವನ ಸಂಕಲನಗಳನ್ನು 20 ನಾಟಕಗಳನ್ನು 3 ಕಾದಂಬರಿಗಳನ್ನು ಹಾಗೂ 10 ಜಾನಪದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಮುದೇನೂರು ಸಂಗಣ್ಣ

ಜಾನಪದ ತಜ್ಞ ಪ್ರಶಸ್ತಿ

ಜಾನಪದ ತಜ್ಞರೆಂದೇ ವಿಶೇಷ ಖ್ಯಾತಿ ಪಡೆದಿರುವ ಸಂಗಣ್ಣನವರು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿಯೆಂಬ ಸಣ್ಣ ಸಾಮಾನ್ಯ ಗ್ರಾಮದಲ್ಲಿ ಜನ್ಮವೆತ್ತಿದರು. ಲಕ್ಷ್ಮೀ ಸರಸ್ವತಿ ಈರ್ವರೂ ನಲಿದು ನರ್ತಿಸುತ್ತಿದ್ದ ಮನೆತನ. ಪ್ರಾಥಮಿಕ ಶಿಕ್ಷಣ ಹುಟ್ಟೂರಿನಲ್ಲಿ ಮುಗಿಸಿ ಹೈಸ್ಕೂಲಿನ ಓದಿಗೆ ಹರಪನಹಳ್ಳಿಗೆ ಹೋಗಿ, ಅಲ್ಲಿ ವಿದ್ಯಾರ್ಥಿ ದೆಸೆಯಲ್ಲಿಯೇ ಕವನ ಸೃಷ್ಟಿಸಿ ಮಾಸ್ತಿ, ಬೇಂದ್ರೆಯಂತಹ ಹಿರಿಯರಿಂದ ಶಹಭಾಸ್‌ಗಿರಿ ಪಡೆದರು. ಮದನ ಪಲ್ಲಿಯಲ್ಲಿ ಕಾಲೇಜು ಶಿಕ್ಷಣ ಪಡೆಯುತ್ತಿರುವ ಕಾಲದಲ್ಲಿ ತೆಲುಗು ಭಾಷೆ ಸಾಹಿತ್ಯ ಅಧ್ಯಯನದ ಅವಕಾಶವೂ ಸಿಕ್ಕಿತಂತೆ. ಸಂಸಾರದ ನೊಗ ಕೊರಳಿಗೆ ಬಿದ್ದು ಪದವಿ ಪಡೆಯುವ ಮುನ್ನವೇ ಕಾಲೇಜು ಬಿಟ್ಟರು. ವಿಶ್ವವಿದ್ಯಾಲಯದ ಒಂದು ಡಿಗ್ರಿ ಪಡೆಯಲಾಗದಿದ್ದರೂ, ಸ್ವತಃ ಅಧ್ಯಯನದಿಂದ ನಾಡಿನ ಪ್ರಸಿದ್ಧ ಸಾಹಿತಿಗಳನೇಕರಿಗೆ ತೀರ ಹತ್ತಿರವಾದರು. ಅವರ ಮನೆಯೇ ಒಂದು ವಿದ್ಯಾಪೀಠವೆನಿಸಿಕೊಂಡಿತು. ಕನ್ನಡ ಇಂಗ್ಲೀಷ್, ತೆಲಗು, ಹಿಂದಿ, ಮರಾಠಿ, ಬಂಗಾಲಿ ಭಾಷೆಗಳ ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಮಹತ್ವದ ಅಪಾರ ಗ್ರಂಥರಾಶಿ ಅವರಲ್ಲಿದೆ. ಗಮನಾರ್ಹವಾದ ಯಾವುದೇ ಕನ್ನಡ ಪುಸ್ತಕ ಪ್ರಕಟವಾದ ಅಲ್ಪಾವಧಿಯಲ್ಲಿ ಸಂಗಣ್ಣನವರ ಆಸ್ತಿ 'ಅನುಭವ' ಗಳಾಗುತ್ತದೆ. ಜ್ಞಾನ ಬೆಟ್ಟದಷ್ಟು, ಮಾಡು ಬಹಳ ಕಡಿಮೆ, ವಿಮರ್ಶಾ ಪ್ರಜ್ಞೆ ಚುರುಕು, ರಂಗಭೂಮಿ ಬಗ್ಗೆ ಹೇಳತೀರದ ಆಸಕ್ತಿ 'ಚೌತಿಯ ಚಂದ್ರ' ಎಂಬ ಪ್ರಗತಿಪರ ಧೋರಣೆಯ ನಾಟಕ ರಚಿಸಿರುವರೆಂದು, ಅದು ಬಹಳಷ್ಟು ಪ್ರಯೋಗಗಳನ್ನು ಕಂಡಿವೆಯೆಂದೂ ದಾಖಲೆ ಇದೆ. ನೇರವಾಗಿ ಬಣ್ಣ ಹಚ್ಚಿನಟಿಸದಿದ್ದರೂ ಹಿಂದೆ ನಿಂತು 'ಆಡಿಸುವ' ಮಹದಾಸೆಯ ವ್ಯಕ್ತಿ, ಈಗ ರಂಗಭೂಮಿಯಲ್ಲಿ ಪ್ರಸಿದ್ಧವಾಗಿರುವ ''ಲಕ್ಷಪತಿರಾಜನ ಕಥೆ' 'ಸಿರಿಸಂಪಿಗೆ' ಹಾಗೂ 'ನಾಗ ಮಂಡಲ' ಈ ನಾಟಕ ಕರ್ತೃಗಳು ಬೇರೆ. ಕಂಬಾರ, ಕಾರ್ನಾಡರರಂತ ಪ್ರಸಿದ್ಧ ನಾಟಕಕಾರರಿಗೂ ಮೂಲ ಸಾಮಗ್ರಿಯೆದಗಿಸಿ ಸಲಹೆ ಇತ್ತವರು ಸಂಗಣ್ಣನವರು.

1984ರಿಂದ ಒಂದು ಅವಧಿಗೆ ಸಂಗಣ್ಣನವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ರಷ್ಯಾದಲ್ಲಿ ನಡೆದ ಭಾರತ ಉತ್ಸಾವಕ್ಕಾಗಿ ಒಂದು ಜಾನಪದ ತಂಡವನ್ನು ಕರೆದೊಯಿದ್ದರು. ಬಳ್ಳಾರಿ ಜಿಲ್ಲೆಯ ಜಾನಪದ ಸಂಗ್ರಹದಲ್ಲಿ ಪರಿವೀಕ್ಷಣೆಯಲ್ಲಿ ಸಂಗಣ್ಣನವರನ್ನು ಮೀರಿಸುವ ಮತ್ತೊಬ್ಬ ವಿದ್ವಾಂಸನಿಲ್ಲ. ಇವರ 'ನವಿಲು ಕುಣಿದಾವೆ' ಕೃತಿ ಅತ್ಯುತ್ತಮ ಜಾನಪದ ಸಂಕಲನ. ಗೊಂಬೆಯಾಟಗಳ ಮೇಲೆ ಕಿನ್ನರಿ ಜೋಗಿಗಳ ಮೇಲೆ ಅಧಿಕಾರ ವಾಣಿಯಿಂದ ಮಾತಾಡಬಲ್ಲ ಸಾಮರ್ಥ್ಯ ಸಂಗಣ್ಣನವರದು.

ಕುರುಬರ ಹೊನ್ನ

ಕಲೆ : ಕೋಲಾಟ

ಕುರುಬ ಹೊನ್ನ ಕೊಡಗು ಜಿಲ್ಲೆಯ ಕಾವಡಿ ಗ್ರಾಮದವರು. ಹೊನ್ನ ಕುರುಬರ ಕೋಲಾಟ ಎಂಬ ಹೊಸ ಪ್ರಕಾರವ ರೂವಾರಿ ಎಂದು ಹೇಳಬಹುದು. ಅಷ್ಟರ ಮಟ್ಟಿಗೆ ಆ ಕಲೆಯನ್ನು ರೂಢಿಸಿಕೊಂಡಿದ್ದಾರೆ. ಸುಮಾರು 75 ವರ್ಷದ ಇವರು ಕನಿಷ್ಟ 50 ಜನರಿಗೆ ಈ ಕೋಲಾಟದಲ್ಲಿ ತರಬೇತಿ ಕೊಟ್ಟಿದ್ದಾರೆ. ಕೂಲಿ ಕೆಲಸ ಮಾಡಿಕೊಂಡೇ ಜೀವನ ಸಾಗಿಸಬೇಕಾಗಿರುವ ಪರಿಸ್ಥಿತಿ ಇವರದು. ಕೋಲಾಟದ ಜೊತೆಯೊಂದಿಗೇ ಕುರುಬರ ಹಾಡು ಹೇಳುವ ಇವರು ಅಕ್ಷರ ಕಲಿತವರಲ್ಲ. ಆದರೆ ನೋಡುವವರ, ಕೇಳುವವರ ಮೈಮನ ನವಿರೇಳುವಂತೆ ಹಾಡುತ್ತಾರೆ, ಕೋಲಾಟ ಹಾಕುತ್ತಾರೆ. ಹೀಗಾಗಿ ಈ ಕಲೆಯಲ್ಲಿ ಒಬ್ಬ ಅಪರೂಪ ಕಲಾವಿದ ರಾಗಿದ್ದಾರೆ. ಸುಮಾರು ಆರುವತ್ತು ವರ್ಷಗಳಿಂದಲೂ ತೆರೆಮರೆಯಲ್ಲಿಯೇ ಇಟ್ಟುಕೊಂಡು ಕಲೆಯೊಂದನ್ನು ಶುದ್ಧ ರೂಪದಲ್ಲಿ ಉಳಿಸಿಕೊಂಡು ಬಂದವರು. ಆ ಮುಖಾಂತರ ಕೀರ್ತಿಯನ್ನು ಸಂಪಾದಿಸಿದರು. ಕೊಡಗಿನ ಅನೇಕ ಬುಡಕಟ್ಟು ಜನಾಂಗಗಳಲ್ಲಿ ಕಾಡುಕುರುಬ ಜನಾಂಗವೂ ಒಂದು. ಅವರು ಕೋಲಾಟವನ್ನು ಒಂದು ವಿಶಿಷ್ಟ ಕಲೆಯನ್ನಾಗಿ ರೂಢಿಸಿಕೊಂಡಿದ್ದಾರೆ. ಆ ಗುಂಪಿನಲ್ಲಿ ಕಲೆಯನ್ನು ಸಂರಕ್ಷಿಸಿದ ಕೀರ್ತಿಗೆ ಹೊನ್ನ ಬಾಜನರಾಗಿದ್ದಾರೆ.

ಶ್ರೀ ಅಗರಿ ಶ್ರೀನಿವಾಸ ಭಾಗವತರು

1906ರಲ್ಲಿ ಸುರತ್ಕಲ್ ಹೊಸಬೆಟ್ಟುವಿನಲ್ಲಿ ಜನಿಸಿದ ಅಗರಿಶ್ರೀನಿವಾಸ ಭಾಗವತರು ಶ್ರೀ ಜೋಯಿಸ ಭಾಗವತರ ಶಿಷ್ಯರು. ಭರತೇಶ ವೈಭವ, ಶ್ರೀದೇವಿ ಭ್ರಮರಾಂಬಿಕಾ ವಿಲಾಸ, ಶ್ರೀದೇವಿ ಲಲಿತಾ ಉಪಾಖ್ಯಾನ, ಬ್ರಹ್ಮಕಪಾಲ, ಶಿವ ಲೀಲಾರ್ಣವ, ಏಸುಕ್ರಿಸ್ತ ಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ ಇತ್ಯಾದಿ ಹದಿನೆಂಟು ಪ್ರಸಂಗಗಳನ್ನು ರಚಿಸಿದ ಶ್ರೀನಿವಾಸ ಭಾಗವತರು ಮಂಗಳೂರು ಪುರಭವನದಲ್ಲಿ, ಗೋವಿಂದದಾಸ ಕಾಲೇಜಿನಲ್ಲಿ, ಬೊಂಬಾಯಿಯ ಷಣ್ಮುಗಾನಂದ ಹಾಲಿನಲ್ಲಿ ಮದರಾಸು ಕೊಯಮುತ್ತೂರು, ನಾಸಿಕಗಳಲ್ಲಿ ಸನ್ಮಾನಿತರಾಗಿದ್ದಾರೆ. ''ಯಕ್ಷಬ್ರಹ್ಮ'' ಎಂಬ ಅಭಿನಂದನಾಗ್ರಂಥವನ್ನು ಬೆಳ್ತಂಗಡಿಯ ಅಭಿಮಾನಿಗಳು ಇವರಿಗೆ ಅರ್ಪಿಸಿ ಸನ್ಮಾನಿಸಿದ್ದಾರೆ.

ಕೂಡ್ಲುಮೇಳ, ಕಟೀಲುಮೇಳ, ಮಹಾಮ್ಮಾಯಿ ಯಕ್ಷಗಾನ ಮಂಡಳಿ, ಮಂಜುನಾಥೇಶ್ವರ ಯಕ್ಷಗಾನ ಮಂಡಳಿ, ಅಂಬಿಕಾ ಅನ್ನಪೂರ್ಣೇಶ್ವರಿ ಮಂಡಳಿಗಳಲ್ಲಿ ಕೆಲಸ ಮಾಡಿದ ಇವರಿಗೆ ಇನ್ನೂರಕ್ಕೂ ಹೆಚ್ಚು ಸನ್ಮಾನ ಸಮಾರಂಭಗಳು ನಡೆದಿವೆ.

ಯಕ್ಷಗಾನ ಕಲೆಯಲ್ಲಿ ತಾವು ಅಭಿನಯಿಸುವುದರ ಮೂಲಕ ಉತ್ತಮ ಕಲಾವಿದರೆನಿಸಿದ್ದೂ ಅಲ್ಲದೆ ಆ ಕೇಂದ್ರದಲ್ಲಿ ಅನೇಕರಿಗೆ ಉತ್ತಮ ರೀತಿಯಲ್ಲಿ ತರಬೇತಿಯನ್ನು ನೀಡಿದವರಾಗಿದ್ದಾರೆ. ತಾವು ಕಲಿತಷ್ಟೇ ಸಾಲದು ಬೇರೆಯವರಿಗೂ ಅದು ಸಿದ್ಧಿಸುವಂತಾಗಬೇಕೆಂದು ಅವರ ಪ್ರಯತ್ನವಾಗಿತ್ತು.

ಶ್ರೀ ವೀರಭದ್ರ ಮಂಜುನಾಥ ಭಂಡಾರಿ

ಅರವತ್ತು ವರ್ಷ ದಾಟಿದ ವೀರಭದ್ರ ಭಂಡಾರಿಯವರು ಒಬ್ಬ ಅಪ್ರತಿಮ ಯಕ್ಷಗಾನ ಮೃದಂಗ ವಾದಕರು. ತಮ್ಮ ಹರೆಯದಲ್ಲಿ ಇವರ ಮೃದಂಗವಾದನವಿಲ್ಲದೆ ಉತ್ತರಕನ್ನಡ ಜಿಲ್ಲೆಯಲ್ಲಿ ಬಯಲಾಟಗಳಿಲ್ಲ ಎನ್ನುವ ಖ್ಯಾತಿಗೆ ಪಾತ್ರರಾಗಿದ್ದರು. ಬರೀ ಮೃದಂಗ ಬಾರಿಸುವುದಷ್ಟೇ ಅಲ್ಲದೆ ಮೃದಂಗ, ಚಂಡೆ ಹಾಗೂ ತಬಲ ತಯಾರಿ ಸುವುದರಲ್ಲಿಯೂ ಇವರು ಅಷ್ಟೇ ನಿಪುಣರು. ವಾದ್ಯ ಬಾರಿಸುವುದು ಇವರ ಮನೆತನದ ಮೂಲ ಉದ್ಯೋಗ. ಅನಾರೋಗ್ಯ ಹಾಗೂ ವಯಸ್ಸಿನ ಕಾರಣದಿಂದ ಇವರಿಗೆ ಈಗ ವಾದ್ಯ ನುಡಿಸಲು ಸಾಧ್ಯವಾಗದಿದ್ದರೂ, ಯಾರಾದರೂ ಕರೆದರೆ ಈಗಲೂ ಸಿದ್ಧ ಎನ್ನುವ ಜೀವನ ಚೈತನ್ಯ ಹಾಗೂ ಹುಮ್ಮಸಿರುವ ಅಪರೂಪದ ಕಲಾವಿದ. ವಾದ್ಯ ತಯಾರಿಕೆಯ ವಿಶಿಷ್ಟ ಕಲೆಯನ್ನೂ ರೂಢಿಸಿಕೊಂಡಿರುವ ಭಂಡಾರಿಯವರು ಮೃದಂಗ ವಾದನಕ್ಕೆ ಮನೆ ಮಾತಾಗಿರುವಂತೆಯೇ ಯಕ್ಷಗಾನ ಲೋಕದಲ್ಲಿ ಮದ್ದಲೆ ತಯಾರಿಕೆಗೂ ಹೆಸರಾದ ಶಿಲ್ಪಿ ಎನಿಸಿದ್ದಾರೆ. ಯಕ್ಷಗಾನ ಕಲೆಯಲ್ಲಿ ನಿಪುಣತೆಯನ್ನು ಹೊಂದಿದವನಿಗೆ ಆ ಕಲೆಯ ಸಂಪೂರ್ಣ ಅರಿವಿರಬೇಕು. ಅದಕ್ಕೆ ಸಂಬಂಧಿಸಿದ ಪರಿಕರಗಳನ್ನು ಸಿದ್ಧಪಡಿಸುವ ಶಕ್ತಿ ಇರಬೇಕು. ಅಂಥ ಶಕ್ತಿ ಭಂಡಾರಿಯವರಿಗಿತ್ತು ಮೃದಂಗವನ್ನು ತಾವೇ ಸಿದ್ಧಪಡಿಸಿ ಅದನ್ನು ಭಾರಿಸುವ ಕಲೆಯಲ್ಲಿ ನಿಪುಣತೆಯನ್ನು ಪಡೆದಿದ್ದರು.

ಶ್ರೀಮತಿ ನಾಗಮ್ಮ

ಅಕ್ಷರದ ಗಂಧವನ್ನೇ ಅರಿಯದ ನಾಗಮ್ಮ ಸೋಬಾನೆ ಹಾಗೂ ಗೀಗಿ ಹಾಡುಗಳ ಗಾಯಕಿ. ಸುಮಾರು 58 ವರ್ಷದ ಈಕೆ ಅವರಿವರ ಮನೆ ಕೆಲಸ ಮಾಡಿಕೊಂಡೇ ಜೀವನ ಸಾಗಿಸಬೇಕಾಗಿದೆ. ಕಮಲಮ್ಮ, ನೀಲಮ್ಮ, ಚಂದ್ರಮ್ಮ, ಮಹಾದೇವಿ, ಸರಸ್ವತಿ, ವಿದ್ಯಾವತಿ ಮುಂತಾದವರಿಗೆ ಸೋಬಾನೆ ಪದಗಳನ್ನು ಕಲಿಸಿದ ಈಕೆಯ ಕಂಠವಿಲ್ಲದೆ ಆಳಂದಿ ಗ್ರಾಮದಲ್ಲಿ ಯಾವುದೇ ಮಂಗಳ ಕಾರ್ಯಗಳು ನಡೆಯುವುದಿಲ್ಲ. ನಾಗಮ್ಮ ಹಾಡಲು ಆರಂಭಿಸಿದರೆ ಸರಸ್ವತಿಯೇ ಅವಳ ನಾಲಗೆಯ ಮೇಲೆ ನರ್ತಿಸುತ್ತಾಳೆ. ಅವಳ ಕಂಠಶ್ರೀ ಎಂಥವರನ್ನೂ ಮೂಕಗೊಳಿಸುತ್ತದೆ. ಹಳ್ಳಿಯ ಮೂಲೆಯಲ್ಲಿದ್ದುಕೊಂಡು ಅಪಾರ ವೈವಿಧ್ಯದ ಜನಪದ ಗೀತ ಸಾಹತ್ಯದ ಗಣಿಯೆನಿಸಿ ಎಲ್ಲರ ಮೆಚ್ಚುಗೆಯನ್ನೂ ಪಡೆದ ಭಾಗ್ಯವಂತ ಶ್ರೀಮತಿ ನಾಗವ್ವ. ನಮ್ಮ ಜನಪದರಲ್ಲಿ ಅಕ್ಷರಸಂಪತ್ತಿನಿಂದ ದೂರವಾದವರು. ಆದರೂ ಅವರಿಗೆ ತಿಳಿವಳಿಕೆ, ಜ್ಞಾನ ಎಲ್ಲವು ಇತ್ತು. ಅವರು ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣಿತರು. ನಾಗಮ್ಮ ಅಂಥವರಲ್ಲಿ ಒಬ್ಬರೆನ್ನಬಹುದು. ಅಕ್ಷರದ ಗಂಧಗಾಳಿಯಿಲ್ಲದೆ ಸಾಕಷ್ಟು ಹಾಡುಗಳನ್ನು ತಮ್ಮ ನೆನಪಿನಂಗಳದಿಂದ ಹಾಡಬಲ್ಲ ಶಕ್ತಿ ಹೊಂದಿದ್ದಾಳೆ.

ಶ್ರೀಮತಿ ಗೊರ್ಲಕಟ್ಟೆ ಹನುಮಜ್ಜಿ

''ಇನ್‌ಪ್ಲಾ (ಇನ್‌ಫ್ಲೊಯೆಂಜಾ) ಕಾಯಿಲೆ ಬಂದಾಗ ನನಗೆ ಹತ್ತು ವರ್ಷ'' ಎಂದು ನೆನಪಿಸಿಕೊಳ್ಳುವ ಹನುಮಜ್ಜಿಗೆ ಸುಮಾರು ಎಂಭತ್ತರ ಮೇಲೆ ವಯಸ್ಸು, ಪಾಲೇನಹಳ್ಳಿಯಲ್ಲಿದ್ದಾಗಲೇ ಬಂಗಾರವ್ವನಿಂದ ಹಾಡುಗಳ ಭಂಡಾರವನ್ನು ಸೂರೆ ಹೊಡೆದ ಈಕೆ ಗೊರ್ಲಕಟ್ಟೆಯ ಬೋಸಯ್ಯನವರಿಗೆ ಎರಡನೇ ಹೆಂಡತಿಯಾಗಿ ಬಂದರು. ಹಾಡು ಕಲಿಯುವ ಆ 16-17ನೇ ವಯಸ್ಸಿನಲ್ಲಿ ''ನೀರಿಗೆ ಹೋದರೆ, ಹೊಲಕ್ಕೆ ಹೋದರೆ, ಕಳೆಗೆ ಹೋದರೆ, ಕಪಲಿಗೆ ಹೋದರೆ ಹಾಡುಗಳದೇ ಧ್ಯಾಸವಂತೆ!''

ಸುತ್ತಮುತ್ತಣ ಹಾಡುಗಾರ್ತಿಯರು ''ಹಾಡುಗಳ ದೇವತೆ'' ಎಂದು ಪರಿಗಣಿಸುವ ಈ ಹನುಮಜ್ಜಿ ಕಥನಕವನಗಳ ಕಣಜವಾಗಿದ್ದಾರೆ. ''ಗುಣಸಾಗರಿ'' ಕಥನಕವನ್ನು ನಾಲ್ಕು ದಿವಸಗಳವರೆಗ ಸತತವಾಗಿ ಮೈದುಂಬಿ ಹಾಡುವ ಈಕೆಯ ಉಡಿಯಲ್ಲಿ ಕತ್ತಲೆರಾಯ (ಕಾಳಿಂಗರಾಯ), ಅಭಿಮನ್ಯು, ಗಂಗಮ್ಮ ಗೌರಮ್ಮ, ಗೊರಪ್ಪ ಜಗಲೂರಜ್ಜ, ಮಾರಮ್ಮ, ಕಾಡಸಿದ್ದಮ್ಮ, ಅಭಿಮನ್ಯು ಮುಂತಾದ ಕಥನಕವನಗಳಿವೆ.

ದುಡಿತದ ಜೊತೆಯಲ್ಲಿ ಮಿಡಿತ ವಿದ್ಯೆ ಇರುತ್ತದೆ. ಶ್ರಮ ಜೀವಿಗಳಿಗೆ ಇದು ಒಂದು ಆಸ್ತಿ ಎನ್ನಬಹುದು. ಹೊಲಗದ್ದೆಗಳಲ್ಲಿಕೆಲಸ ಮಾಡುವಾಗ ಬೇಸವ-ಆಯಾಸವನ್ನು ನೀಗಿಕೊಳ್ಳಲೆಂದು ಹಾಡುವುದುಂಟು ಕುಣಿದು ಕುಪ್ಪಳಿಸುವುದುಂಟು. ಹನುಮಜ್ಜಿ ಈ ಗುಂಪಿಗೆ ಸೇರುವ ಕಲಾವಿದೆ. ಬದುಕಿನೊಂದಿಗೇ ಅದಕ್ಕೆತಕ್ಕಂತೆ ಹಾಡುವ ಸೊಗಸು ಕಲಾವಿದೆ.

ಶ್ರೀ ಕುಂಞರಾಮ ಮಣಿಯಾಣಿ

ಕಾಸರಗೋಡು ತಾಲ್ಲೂಕಿನ ಉಪ್ಪಂಗಳದ ದಿ। ಮಹಾಲಿಂಗ ಮಣಿಯಾಣಿ ಮತ್ತು ಪಾಚಿಯಮ್ಮ ದಂಪತಿಗಳ ಮಗನಾಗಿ 1917ರಲ್ಲ ಜನಿಸಿದ ಕುಂಞರಾಮ, ಉಪ್ಪಂಗಳದ ದಿ। ಶಾಂತಪ್ಪನವರಲ್ಲಿ ನಾಟ್ಯಾಭ್ಯಾಸ ಮಾಡಿ, ಮುಂಡರ ಕೂಳಂಜಿ ಬಟ್ಟುರೈಗಳಿಂದ ಅರ್ಥಗಾರಿಕೆಯನ್ನು ಕಲಿತು ಅಡೂರು ಮೇಳದ ಮೂಲಕ ರಂಗ ಪ್ರವೇಶಮಾಡಿದ ಮೇಲೆ ಹಿಂತಿರುಗಿ ನೋಡಿದ್ದೇ ಇಲ್ಲ. ಸ್ತ್ರೀವೇಷ, ಪುಂಡು ವೇಷಗಳ ಹಂತವನ್ನು ಸುಲಲಿತವಾಗಿ ದಾಟಿ ಉತ್ತಮ ಪೀಠಿಕೆ ವೇಷಧಾರಿಯಾಗಿ ನಂತರ ಅರ್ಜುನ, ದೇವೇಂದ್ರ, ಕಾರ್ತವೀರ್ಯ, ಇಂದ್ರಜಿತು ಮುಂತಾದ ರಾಜವೇಷಗಳಲ್ಲಿ ಅಪ್ರತಿಮ ಅಭಿನಯ ಕೌಶಲ್ಯವನ್ನು ತೋರಿದ್ದಾರೆ. ರಾವಣ, ಕುಂಭಕರ್ಣ, ಶೂರಪದ್ಮ, ನರಕಾಸುರ ಮುಂತಾದ ಖಳಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸುವ ಇವರು ಬಣ್ಣದ ವೇಷಧಾರಿಗಳಿಗೆ ಸವಾಲೆನಿಸಿರುವ ಮಹಿಷಾಸುರನ ಪಾತ್ರದಲ್ಲಿ ಅಭಿನಯ ಮತ್ತು ನೃತ್ಯದ ಪರಾಕಾಷ್ಠೆಯನ್ನು ಮುಟ್ಟಿದ್ದಾರೆ.

ಶ್ರೀ ಬಸಯ್ಯ ಜಿ. ಸಮಾಳದ

ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ''ಆಟ'' ವಂದೇ ಕರೆಯಲಾಗುವ ಈ ಪ್ರಕಾರವನ್ನು ವಿದ್ವಾಂಸರು ''ಬಯಲು'' ''ಮೂಡಲತಾಯದಾಟ'', ''ದೊಡ್ಡಾಟ'' ಎಂದು ಕರೆಯುತ್ತಾರೆ. ದೊಡ್ಡಾಟದ ಕಥಾವಸ್ತು ಪೌರಾಣಿಕವಾಗಿದ್ದು ವೀರ ರೌದ್ರರಸ ಪ್ರಧಾನವಾಗಿರುತ್ತದೆ. ಎಲ್ಲ ಕಥೆಗಳಲ್ಲಿ ಕಾಳಗವೇ ಪ್ರಮುಖ ಅಂಶ. ಈ ಎಲ್ಲ ಅಂಶಗಳಿಂದಲೂ ಸಣಾಮಿಕಾಂತಲೂ ದೊಡ್ಡದಾಗಿ ಕಂಡಿದ್ದರಿಂದ ದೊಡ್ಡಾಟ ಎಂದು ಕರೆದಿರಬಹುದು.

ಸುಮಾರು 82 ವರ್ಷದ ಬಸಯ್ಯ ಸಮಾಳದ ಅವರು ದೊಡ್ಡಾಟದ ಕಲಾವಿದರು. ಕೇವಲ ನಾಲ್ಕನೇ ತರಗತಿಯವರೆಗೆ ಓದಿದ ಇವರಿಗೆ ಹತ್ತಾರು ಮಂದಿ ಶಿಷ್ಯರಿದ್ದಾರೆ. ಹಲವಾರು ಕಲಾಮಹೋತ್ಸವಗಳಲ್ಲಿ ಭಾಗವಹಿಸಿದ್ದಾರೆ. ಸು. 50 ವರ್ಷಗಳಿಂದ ಆಡಿದ -ಆಡಿಸಿರುವ ಆಟಗಳೆಂದರೆ ಪ್ರಮೀಳಾ, ದುರ್ಯೋಧನ ಗರ್ವಭಂಗ, ಮಯೂರಧ್ವಜ, ಚಿತ್ರಕೇತು, ಕರ್ಣಾರ್ಜುನ ಪ್ರಸಂಗ, ತ್ರಿಪುರ ಸಂಹಾರ, ಮಹಾಮ್ಮಾಯಿ ಆಟ. ದಕ್ಷಬ್ರಹ್ಮನ ಕಥೆ, ದ್ರೋಣಪರ್ವ ಮುಂತಾದವು.

ಒಳ್ಳೆಯ ಕಂಚಿನ ಕಂಠವನ್ನುಪಡೆದಿರುವ ಶ್ರೀ ಬಸಯ್ಯ ಸಮಾಳದವರು ತಾಳ ಹಿಡಿದು ನಿಂತರೆಂದರೆ ರಸಿಕರಲ್ಲಿ ರಸ ರೋಮಾಂಚನವನ್ನು ತರುತ್ತಾರೆ. ಇವರಿಗೆ ತಿಳಿಯದ ರಾಗವಿಲ್ಲ. ಇವರ ಮಟ್ಟುಗಳ ವೈವಿಧ್ಯವೂ ಅಷ್ಟೇ. ದೊಡ್ಡಾಟದ ಸಂಗೀತಗಾರರಾಗಿ, ಕತೆಗಾರರಾಗಿ, ಪಾತ್ರಧಾರಿಗಳಾಗಿ ಇವರು ಕಲೆಗಾಗಿ ತಮ್ಮ ಬದುಕನ್ನು ಸವೆಸಿದ ಮಹಾತ್ಯಾಗಿ, ಇವರ ಕಲಾಸೇವೆಯನ್ನು ಕಂಡು ಸರ್ಕಾರ ತಿಂಗಳಿಗೆ 150 ರೂ.ಗಳ ಮಾಸಾಶನ ಮಂಜೂರು ಮಾಡಿದೆ.

ಶ್ರೀಮತಿ ನಂಜಮ್ಮ

ಕಾವೇರಿ ನೀರಿನ ಸಮೃದ್ಧ ಬಳಕೆಯಿಂದ ವಂಚಿತವಾಗಿರುವ ಚೆಕ್ಕಳಲೆ ಭಾಗದ ನಂಜನಮ್ಮನಂಥ ಜನಪದ ಗಾಯಕಿಯರ ರಾಗ ಕಾವೇರಿಯಿಂದ ಖಂಡಿತ ವಂಚಿತವಾಗಿಲ್ಲ. ನಂಜಮ್ಮನ ಬಾಯಿಂದ ಸೋಭಾನೆಪದ, ಬೀಸೋಪದ, ಒಸಗೆಪದ, ಗ್ರಾಮದೇವತೆಗಳಾದ ಮಾರಮ್ಮ, ಚಿಕ್ಕಮ್ಮ, ತೋಪಿನಪ್ಪ, ಅರೆತಿಮ್ಮಪ್ಪ, ಚುಂಚನಗಿರಿ ಭೈರಪ್ಪ, ಮೇಲುಕೋಟೆ ಚೆಲುವರಾಯ, ನಂಜನಗೂಡು ನಂಜುಂಡೇಶ್ವರ, ಮಲೆಯಮಾದೇಶ್ವರ, ತಿರುಪತಿ ತಿಮ್ಮಪ್ಪ, ವರದಪ್ಪ, ನಂದಿ, ದೇವಿರಮ್ಮ, ಜವರಾಯ ಅಲ್ಲದೆ ಬಂಜೆ ಹೊನ್ನಮ್ಮ, ಬಳೆಗಾರ, ಉತ್ತರದೇವಿ, ಅಣ್ಣತಂಗಿ, ಸಂಗಾತಿ ಮೊದಲಾದ ಕಥನಕವನಗಳು ನಿರರ್ಗಳವಾಗಿ ಕಾವೇರಿಗಿಂತಲೂ ಜೋರಾಗಿ ಹರಿಯುತ್ತವೆ.

ಹುಟ್ಟಿದ ಊರು, ಸೇರಿದ ಊರುಗಳೆರಡಕ್ಕೂ ಹೆಸರು ತಂದಿರುವ ನಂಜಮ್ಮ ಕಲಿತ ಹಾಡುಗಳಿಂದಾಗಿ ಬೆಂಗಳೂರು ಆಕಾಶವಾಣಿಯ ಒಬ್ಬ ಉತ್ತಮ ಗಾಯಕಿಯಾಗಿದ್ದಾರೆ.

ಶ್ರೀ ತಳಾರಿ ಗಂಗಪ್ಪ

ಕೊಡಗು ಮತ್ತು ದಕ್ಷಿಣ ಕನ್ನಡವನ್ನುಳಿದು ಕರ್ನಾಟಕದಾದ್ಯಂತ ತಮಟೆ ಪ್ರಸಿದ್ಧವಾಗಿದೆ. ಹರಿಜನರಅದರಲ್ಲೂ ಮುಖ್ಯವಾಗಿ ಆದಿ ಕರ್ನಾಟಕದವರ ವಾದನ ವಿಶೇಷ ವೆಂಬುದು ತಮಟೆಗಿರುವ ಹೆಗ್ಗಳಿಕೆ. ಹಲಗೆ, ತಪ್ಪಡ, ಪಟ್ಟಹರೆ ಎಂದೆಲ್ಲ ಕರೆಯುವುದುಂಟು. ತೆಲುಗಿನಲ್ಲಿ ''ಪಲಕ'' ಎಂದು ಕರೆಯುತ್ತಾರೆ. ಪ್ರಾಚೀನ ಇತಿಹಾಸವಿರುವ ತಮಟೆ ಸಾಧನ ಕಲೆಯಲ್ಲಿ ತಳಾರಿ ಗಂಗಪ್ಪ ನಿಷ್ಣಾತರು.

ತಂದೆಯಿಂದ ವಂಶಪಾರಂಪರ್ಯವಾಗಿ ಬಂದ ತಮಟೆಯ ಕಲೆಯನ್ನುಬಹಳ ನಿಷ್ಠೆಯಿಂದ ಕಲಿತ ಗಂಗಪ್ಪನವರಿಗೆ ''ತಳಾರಿ'' ಎಂಬುದು ಊರಿನ ಬಿಟ್ಟಿ ಚಾಕರಿ ಮಾಡುತ್ತಿದ್ದುದಕ್ಕೆಬಂದ ಮನೆತನದ ಹೆಸರು. ಓದಿನ ಗಂಧವರಿಯದ ತಳಾರಿಗಂಗಪ್ಪ ತಂದೆ ಜೊತೆ ಸೇರಿ ತಂಡ ಮಾಡಿಕೊಂಡು ತಮಟೆಯ ಹಲವಾರು ಗತ್ತು ವರಸೆಗಳನ್ನು ಕಲಿತವರು. ನಲವತ್ತಕ್ಕಿಂತ ಹೆಚ್ಚಿನ ವರಸೆಗಳನ್ನು ಬಾರಿಸುವ ಗಂಗಪ್ಪ ರಮ್‌ಡೋಲು, ತಾಜ (ತಾಸೆ), ತುಡುಮಂಗಳ ಜೊತೆ ಸೇರಿ''ತಮಟೆ ಮೇಳ'' ವನ್ನೇ ಏರ್ಪಡಿಸುತ್ತಾರೆ. ಹಾಗೆಯೇ ವಾಲಗ, ಡೋಲಿನ ಜೊತೆ, ಕೀಲುಕುದುರೆ, ಕರಗ, ಗಾರುಡಿಗೊಂಬೆ, ಹುಲಿವೇಷ, ಕರಡಿವೇಷ, ಕೋಲುವರಸೆ ಮುಂತಾದ ಕಲಾ ಪ್ರದರ್ಶನದಲ್ಲಿ ಅದ್ಭುತವಾಗಿ ತಮಟೆ ಬಾರಿಸುತ್ತಾರೆ. ಪುಂಗನೂರಿನ ಗಂಗಮ್ಮನ ಜಾತ್ರೆಯಲ್ಲಿ, ವಾನರಾಶಿ ಜಾತ್ರೆಯ ಈರ್ಲಪ್ಪನ ಜಾತ್ರೆಯಲ್ಲಿತಲಗುಂದ ಎಲ್ಲಮ್ಮನ ಉತ್ಸವದಲ್ಲಿ ಪ್ರಮುಖ ತಮಟೆ ವಾದಕರಾಗಿ ಭಾಗವಹಿಸಿದ್ದಾರೆ.

ಶ್ರೀ ಜಿ. ಆರ್. ಚಿಕ್ಕಮುದ್ದಯ್ಯ

ನೋಡುವುದಕ್ಕೆ ರೌದ್ರ ಪಾತ್ರಗಳನ್ನು ಮಾಡುವ ನಟನಂತೆಕಾಣಿಸುವ ಚಿಕ್ಕಮುದ್ದಯ್ಯ ಭಾಗವತಿಕೆಯ ಜೊತೆಗೆ ಮೃದಂಗ ಕಟ್ಟುವುದರಲ್ಲೂ ಸಿದ್ಧಹಸ್ತರು. ಅಕ್ಷರಗಳಿಗೆ ಅಸ್ಪೃಶ್ಯರಾದ ಇವರು ಕಲಿಯಲೇಬೇಕೆಂದು ಹಠ ಹಿಡಿದು ಸ್ಕೂಲಿನ ಹೊರಗಡೆಯೇ ಯಾರೋ ಸಾಬರಿಂದ ಎರಡನೆಯ ತರಗತಿಯವರೆಗೆ ಕಲಿತರು. ನಮ್ಮ ದೇಶದ ದೊಡ್ಡ ದುರಂತ ಅಸ್ಪೃಶ್ಯತೆ. ಇದೊಂದು ಅಮಾನವೀಯವಾದ ವಿಷಯ. ಯಾರಲ್ಲಿಯೇ ಇರಲಿ ಕಲೆಯನ್ನು ಇಷ್ಟಪಡಬೇಕು, ಬೆಳೆಯುವಂತೆ ಮಾಡಬೇಕು. ಆದರೆ ಅಂಥ ಪರಿಸರ ಇಂಡಿಯಾದಂಥ ದೇಶದಲ್ಲಿ ಇಲ್ಲ. ಆದರೂ ಚಿಕ್ಕ ಮುದ್ದಯ್ಯನಂಥವರು ಇಂಥ ಪರಿಸರದಲ್ಲಿಯೂ ಎಲ್ಲ ಸಮಸ್ಯೆಗಳ ನಡುವೆಯೂ ಕಲೆಯನ್ನು ಬೆಳಕಿಗೆ ತಂದವರು, ಪೋಷಿಸಿದವರು, ಜನತೆಗೆ ಕಲಿಸಿದರೆಯ ಹೆಗ್ಗಳಿಕೆಗೆ ಪಾತ್ರರಾದವರು. ಕೈಯಲ್ಲಿ ತಾಳ ಹಿಡಿದು, ಕಾಲಿಗೆ ಗೆಜ್ಜೆ ಕಟ್ಟಿದ ಇವರಿಗೆ ಬಯಲಾಟ ಕಲಿಸಿದವರು ಇವರ ಸ್ವಂತ ಮಾವ. ಹರಿಜನರಾದ ಇವರಿಂದ ಬಯಲಾಟ ಕಲಿಯಲು ಬೇರೆಯವರು ಬರದಿದ್ದಾಗ ಎದೆಗುಂದದೆ ಹರಿಜನಕೇರಿಗಳಲ್ಲೇ ಕಲಿಸಿ ಪಾತ್ರಗಳಿಗೆ ಜೀವ ತುಂಬಿದರು. ಯಾವ ಯಾವ ಪ್ರಸಂಗಗಳಿಗೆ ಯಾವ ಯಾವ ಪಾತ್ರಗಳ ಸ್ವಭಾವ ವೇಷಭೂಷಣ ಹೇಗಿರಬೇಕೆಂಬುದನ್ನು ಆಯಾ ಹಸ್ತ ಪ್ರತಿಗಳಲ್ಲೇ ಚಿತ್ರಬಿಡಿಸಿ ತೋರಿಸುವರು.

ಬಯಲಾಟ ಆಡಿಸಿದಾಗ ಬರಿ, ಬಟ್ಟೆಬರೆ, ಕಾಳು ಕಡ್ಡಿಗಳನ್ನು ಮಾತ್ರಪಡೆದ ಇವರು ದುಶ್ಶಾಸನ ಕತೆ. ಮೂರೂವರೆ ವಜ್ರ, ಐರಾವತ, ದೇವಿಮಹಾತ್ಮೆ, ಮನ್ಮಥ ವಿಜಯ ಇಂದ್ರಜಿತು ಮುಂತಾದ ಪ್ರಸಂಗಗಳನ್ನು 1947ರಿಂದ ಆಡಿಸುತ್ತಿದ್ದಾರೆ.

ಶ್ರೀ ಸಿದ್ದಪ್ಪ ಬೇಲಪ್ಪ ಸವದತ್ತಿ

ಬಿಜಾಪುರ, ಬಳ್ಳಾರಿ, ತುಮಕೂರು, ಬೆಳಗಾಂ, ರಾಯಚೂರು, ಮೊದಲಾದ ಜಿಲ್ಲೆಗಳಲ್ಲಿ ಡೊಳ್ಳುಕುಣಿತ ಪ್ರಚಲಿತವಾಗಿದೆ. ''ಡೊಳ್ಳು'' ಎನ್ನುವ ವಾದ್ಯ ವಿಶೇಷ ದೊಂದಿಗೆ ನಡೆಯುವ ಈ ಕುಣಿತ ಕುರುಬ ಜಾತಿಯೊಂದಿಗೆ ನೇರವಾದ ಸಂಬಂಧ ಹೊಂದಿದೆ. ಆದರೂ ದೀವರು, ನಾಮಕರು, ಉಸ್ಕಾಕರು – ಮುಂತಾದವರೂ ಇದೀಗ ಈ ಕಲೆಯಲ್ಲಿ ಪಾಲ್ಗೊಳ್ಳುತ್ತಾರೆ. ಸಿದ್ದಪ್ಪಜ್ಜ ಡೊಳ್ಳು ಕಲೆಯೊಂದಿಗೆ ಗುರ್ತಿಸಿಕೊಂಡವರು.

ಕಾಡಾಪೂರದ ಸಿದ್ದಪ್ಪಜ್ಜ ಎಂದೇ ಪ್ರಖ್ಯಾತರಾಗಿರುವ ಈ ಡೊಳ್ಳಿನ ಕಲಾವಿದರಿಗೆ ಒಂದು ನೂರು ವರ್ಷ ವಯಸ್ಸು, ಕಿವಿ, ಕಣ್ಣು ತುಸು ಮಂದವಾಗಿದ್ದರೂ ಬೆನ್ನು ತುಸುಬಾಗಿದ್ದರೂ ಕೋಲಿನ ಸಹಾಯವನ್ನು ಮಾತ್ರ ಪಡೆದ ಈ ಕಲಾವಿದನ ಪ್ರತಿಭೆ ಮಾತ್ರ ಇನ್ನೂ ಪ್ರಖರವಾಗಿದೆ. ಸುಮಾರು 80 ವರ್ಷಗಳ ಹಿಂದೆ ಬಾಬಾಜಿ ಜಮಾದಾರ ಹೆಸರಿನ ಜನಪದ ಕವಿಯಿಂದ ಇವರು ಹೊಸ ಹೊಸ ಹಾಡುಗಳನ್ನು ಕಲಿತರು, ವಿಚಿತ್ರವೆಂದರೆ ಬಾಬಾಜಿ ಕಲಿತದ್ದು ಮರಾಠಿ ಭಾಷೆ, ಆದರೆ ಹಾಡುಗಳನ್ನು ರಚಿಸಿದ್ದು ಕನ್ನಡದಲ್ಲಿ ಸಿದ್ದಪ್ಪಜ್ಜನಿಗೆ ಮರಾಠಿ ಲಿಪಿಯಲ್ಲಿ ಬರೆದು ಕೊಟ್ಟಾಗ ಅನಿವಾರ್ಯವಾಗಿ ಮರಾಠಿ ಲಿಪಿಯನ್ನು ಕಲಿತರು. ಆದರೆ ಇವರಿಗೆ ಮರಾಠಿ ಬಾ; ಮಾತ್ರಬರುತ್ತಿಲ್ಲ.

ಸ್ವಾತಂತ್ರ್ಯ ಪೂರ್ವ ಕಾಲದಿಂದಲೂ ಡೊಳ್ಳಿನ ಹಾಡಿನ ಅನೇಕ ಮಜಲುಗಳಲ್ಲಿ ಭಾಗವಹಿಸಿ ಬೆಳ್ಳಿ ಖಡೆ, ಧೋತ್ರ, ರುಮಾಲುಗಳನ್ನು ಪಡೆದಿರುವ ಇವರು ಬೆಳಗಾವಿ ವಿಜಾಪುರ ಜಿಲ್ಲೆಗಳ ಅನೇಕ ಕಡೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಶ್ರೀ ಗುರಣ್ಣ ಮಾರ್ತಾಂಡಪ್ಪ ಹಡಪದ

ಹಳ್ಳಿಗಳಲ್ಲಿ ಖಾಯಿಲೆಗಳಿಗೆ ಗಿಡ ಮೂಲಿಕೆ ಔಷಧಿಗಳನ್ನು ಕೊಟ್ಟು, ರೋಗವನ್ನು ಗುಣಪಡಿಸುವವರನ್ನು ನಾಟಿವೈದ್ಯರು ಎಂದು ಕರೆಯುತ್ತಾರೆ. ಇವರು ಮೂಲಿಕೆಗಳನ್ನು ತರುವಾಗ ಯಾರೊಂದಿಗೂ ಮಾತನಾಡುವುದಿಲ್ಲ. ಅದರ ಹೆಸರನ್ನು ಹೇಳುವುದಿಲ್ಲ. ಹೇಳಿದರೆ ರೋಗ ವಾಸಿಯಾಗುವುದಿಲ್ಲವೆಂಬ ನಂಬಿಕೆ ಅವರದು. ಅಂಥ ಅಪಾರ ನಂಬಿಕೆಗಳೊಂದಿಗೆ ವೈದ್ಯರ ಕೆಲಸವನ್ನು ಮಾಡುವವರು ಹಳ್ಳಿಗಳಲ್ಲಿ ಅಪಾರಮಂದಿ ಇದ್ದಾರೆ ಅಂಥವರಲ್ಲಿ ಗುರಣ್ಣ ಒಬ್ಬರು.

ಎಪ್ಪತ್ತೈದು ವರ್ಷದ ಶ್ರೀ ಗುರಣ್ಣ ತಮ್ಮ ಇಪ್ಪತ್ತನೆಯ ವಯಸ್ಸಿನಿಂದಲೇ ಜನಪದ ವೈದ್ಯಕೀಯ ಸೇವೆಯನ್ನು ಕೈಗೊಂಡರು. ತಂದೆ ಮಾರ್ತಾಂಡಪ್ಪನವರೇ ಇವರಿಗೆ ಗುರು.

ಇವರ ವಿಶೇಷ ಎಂದರೆ ಕಣ್ಣಲಿ ಹೂ ಬಿದ್ದರೆ ತೆಗೆಯುವುದು. ಒಂದು ಸಲ ಇವರು ಹೂವನ್ನು ತೆಗೆದರೆ ಮತ್ತೊಮ್ಮೆ ಅದು ಕಾಣಿಸಿಕೊಳ್ಳುವುದಿಲ್ಲ ಎಂಬ ದಂತಕತೆಯಾಗಿದ್ದಾರೆ. ಇದಲ್ಲದೆ ಗಂಡಮಾರಿ, ಗಜಕರ್ಣ ಹುಳುಕು, ಕಜ್ಜಿ ಇಂತಹ ಸೋಂಕು ರೋಗಕ್ಕೂ ತಪ್ಪಲ ಹಿಂಡಿ ಕಡಿಮೆ ಮಾಡುತ್ತಾರೆ. ಮನುಷ್ಯರಿಗೆ ಔಷಧಿಕೊಟ್ಟಂತೆ ದನಕರುಗಳಿಗೂ ಕಾಲುಬೇನೆ, ಬಾಯಿಬೇನೆ ಔಷಧಿ ಮಾಡಿ ವಾಸಿಮಾಡುತ್ತಾರೆ.

ಪ್ರತಿಫಲ ಏನನ್ನೂ ಬಯಸದೆ ದನಕರುಗಳಿಗೆ, ಜನಗಳಿಗೆ ತಪ್ಪಲ, ಭಸ್ಮಗಳ ಮೂಲಕ ಔಷಧ ಕೊಟ್ಟು ಬಡವರ ಬಂಧು ಎನ್ನಿಸಿಕೊಂಡ ಇವರು ಈ ವೃತ್ತಿಯನ್ನು ಸೇವೆ ಎಂದು ಮಾಡುತ್ತಾರೆ.

ಶ್ರೀ ಜೋಗಿ ಬೂದ್ಯಪ್ಪ

ಲಾವಣಿ ಸಂಪ್ರದಾಯವು ಉತ್ತರ ಕರ್ನಾಟಕಕ್ಕೆ ವಿಶಿಷ್ಟವಾದದ್ದು. ಅಲ್ಲಿಯ ಹಲವು ಜಿಲ್ಲೆಗಳಲ್ಲಿ ಪ್ರಾದೇಶಿಕ ವ್ಯತ್ಯಾಸಗಳೊಂದಿಗೆ ಈ ಸಂಪ್ರದಾಯ ಅಸ್ತಿತ್ವದಲ್ಲಿದೆ. ದಕ್ಷಿಣ ಕರ್ನಾಟಕದ ಭಾಗಗಳಲ್ಲೂ ಕೂಡ ಲಾವಣಿ ಎಂಬ ಒಂದು ಪ್ರಕಾರವಿದ್ದರೂ ಉತ್ತರದಷ್ಟು ವೈವಿಧ್ಯ ಅದಕ್ಕಿಲ್ಲ. ಲಾವಣಿ ಹಾಡುಗಳು ಬಹಳ ವಿಸ್ತಾರವಾದವುಗಳಲ್ಲ. ಆದರೂ ಅವಕ್ಕೆ ತನ್ನದೇ ಆದ ವೈಶಿಷ್ಟ್ಯ ಇದೆ. ಇಂಥ ಲಾವಣಿ ಹೇಳುವಲ್ಲಿ ಜೋಗಿ ಬೂದ್ಯಪ್ಪ ಒಬ್ಬರು.

ತಲೆಗೆ ಪೇಟ ಕಟ್ಟಿ ಕಾಲಿಗೆ ಗೆಜ್ಜೆ ಕಟ್ಟಿ ಕಿನ್ನರಿ ಹಿಡಿದು ಜೋಗೇರಬೂದಪ್ಪರಂಗದ ಮೇಲೆ ನಿಂತನೆಂದರೆ ಸುತ್ತಲಿನ ಪರಿಸರವನ್ನುಮರೆಯುತ್ತಾರೆ. ಪರಿಸರದಲ್ಲಿರುವವರು ತಮ್ಮನ್ನು ತಾವೇ ಮರೆಯುವಂತೆ ಮಾಡುತ್ತಾರೆ. ಕಥೆಗಳು, ಹಾಡುಗಳು, ಲಾವಣಿಗಳು ಇವರ ಬಾಯಿಂದ ನಾಮುಂದು ತಾಮುಂದು ಎಂದು ನುಗ್ಗಿ ನುಗ್ಗಿ ಬರುತ್ತವೆ. ಹೊಸೂರಿನಲ್ಲಿ ಕಾಲಭೈರವೇಶ್ವರ ಜೋಗಿ ಸಂಘದ ಸ್ಥಾಪಕರಾಗಿರುವ ಇವರಿಗೆ ಬಂದಿರುವ ಪ್ರಶಸ್ತಿಗಳನ್ನು ತೋರಿಸಲೂ ಸಂಕೋಚ. ಲಾವಣಿ ಸಾಹಿತ್ಯದಲ್ಲಿ ಹೆಚ್ಚು ಪರಿಣತರಾಗಿರುವ ಬೂದ್ಯಪ್ಪ ಸಮಕಾಲೀನ ಸಂಗತಿಗಳ ಬಗ್ಗೆ ಲಾವಣಿ ಕಟ್ಟಿ ಹಾಡುವುದರಲ್ಲಿ ಸಿದ್ಧಹಸ್ತರು. ರೈತರ ಬಗ್ಗೆ ಇವರು ಹಾಡುವ ಲಾವಣಿ ಈಗ ಸ್ಥಳೀಯ ಜನರ ಬಾಯಲ್ಲಿ ಮರುದನಿಗುಡುತ್ತಿದೆ. ಕಿನ್ನರಿ ಜೋಗಿ ಪರಂಪರೆಗೆ ಸೇರಿದ ಇವರು ಅರ್ಜುನ ಜೋಗಿಯ ಹಾಡಿನ ಜೊತೆ ಮಹಾಭಾರತದ ಇನ್ನೂ ಅನೇಕ ಭಾಗಗಳನ್ನು ಬಲ್ಲರು. ಇವು ಜೋಗಿಗಳ ಮುಖ್ಯ ಕಥೆಗಳಾದರೂ ಸಾಕಷ್ಟು ದೀರ್ಘಕಥನ ಕಾವ್ಯಗಳ ರಾಶಿಯೇ ಇವರ ಜೋಳಿಯಲ್ಲಿ ಉಂಟು.

ಶ್ರೀ ಅಗಸರ ಮಾಲಣ್ಣ

ಅತ್ಯಂತ ಬಡಕುಟುಂಬದಲ್ಲಿ ಜನಿಸಿ, ಹಿಂದಿನ ಲೋಯರ್ ಸೆಕೆಂಡರಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ ಅಗಸರ ಮಾಲಣ್ಣ ವ್ಯವಸಾಯವನ್ನು ವೃತ್ತಿಯನ್ನಾಗಿ ಕೋಲಾಟವನ್ನು ಪ್ರವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಮಳಲಿಯ ಕರಿಯಮ್ಮನ ಗಿಡ್ಡಪ್ಪಣ್ಣನವರಿಂದ ಕಲಿತ ಕೋಲಾಟವನ್ನು ಹೊಳೆನರಸೀಪುರ ತಾಲ್ಲೂಕಿನಲ್ಲೆಲ್ಲಾ ಪ್ರದರ್ಶಿಸಿ, ತಾಲ್ಲೂಕಿನಾಚೆಯ ಹಳ್ಳಿಗಳಲ್ಲೂ ಮನೆಮಾತಾಗಿದ್ದಾರೆ. ಕೋಲಾಟದ ಒಂದು ವಿಶಿಷ್ಟ ಪ್ರಕಾರವಾದ ತಿಪರಿ ಕೋಲಾಟದಲ್ಲಿ ಅದ್ವಿತೀಯ ನೈಪುಣ್ಯವನ್ನು ಮಾಂತ್ರಿಕತೆಯನ್ನು ಕೈಗೂಡಿಸಿಕೊಂಡ ಮಾಲಣ್ಣ, ಕೋಲಾಟದ ಹಾಡುಗಳಿಗೆ ರಾಮಾಯಣ, ಮಹಾಭಾರತ, ಶನಿಮಹಾತ್ಮೆಯ ಪ್ರಸಂಗಗಳನ್ನುಬಳಸಿಕೊಂಡಿದ್ದಾರೆ. ಭಾಷಾಶೈಲಿ ಉಚ್ಚಾರಣೆ ಶುದ್ಧತೆಯನ್ನು ಕಾಯ್ದುಕೊಂಡಿರುವ ಈ ಕಲಾವಿದ ಬಗೆಬಗೆಯ ಜನಪದ ಗೀತೆಗಳನ್ನೂ ಸುಶ್ರಾವ್ಯವಾಗಿ ಹಾಡುತ್ತಾರೆ. ಮಳಲಿಯಲ್ಲಿ 30 ವರ್ಷಗಳ ಹಿಂದೆ ಆರಂಭವಾದ ಶ್ರೀ ಲಕ್ಷ್ಮೀನಾರಾಯಣ ಯುವಕ ಸಂಘದ ಸದಸ್ಯರಾಗಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ.

ಕೃಷಿ ಜೀವನದ ಬಗ್ಗೆಉದಾಸೀನತೆ ತಾತ್ಸಾರ ಮನೋಭಾವ ಬೆಳೆದಂತೆ ಜಾನಪದದ ಬಗ್ಗೆಯೂ ಒಂದು ರೀತಿಯ ಕೀಳರಿಮೆ ಕಾಣಿಸಿಕೊಂಡಿತ್ತು. ಹಳ್ಳಿಯ ಸಾಹಿತ್ಯ ಎಂಬ ಟೀಕೆಗೆ ಗುರಿಯಾಗಿತ್ತು. ಆದರೆ ಈಗ ಆ ರೀತಿ ಹೇಳುವಂತಿಲ್ಲ. ದುಡಿಮೆಯ ಭಾಗವಾಗಿ ಬರುವ ಪ್ರದರ್ಶಕ ಕಲೆಗಳಂತೂ ಮನುಷ್ಯನನ್ನು ದಂಗುಬಡಿಸಿವೆ. ಪ್ರದರ್ಶಕ ಕಲೆಗಳಲ್ಲಿ ಕೋಲಾಟವೂ ಒಂದು. ಈ ಕಲೆಯಲ್ಲಿ ಪರಿಣತರಾದವರು ಅಗಸರ ಮಾಲಣ್ಣ.

ಶ್ರೀಮತಿ ಪುಟ್ಟತಾಯಮ್ಮ

ಹಣಬೆ ಗ್ರಾಮದ ದಲಿತ ಜನಾಂಗಕ್ಕೆ ಸೇರಿದ ಶ್ರೀಮಂತ ಕಂಠದ ಶ್ರೀಮತಿ ಪುಟ್ಟತಾಯಮ್ಮ ಈಗಲೂ ಸ್ವಚ್ಛವಾಗಿ ಜನಪದ ಸಂಪ್ರದಾಯದ ಹಾಡುಗಳನ್ನು ಹಾಡುತ್ತಾರೆ. ಚಿಕ್ಕಂದಿನಿಂದಲೂ ಸೋಬಾನೆ, ಗ್ರಾಮದೇವತೆಯ ಗೀತೆಗಳು, ನಾಟಿ ಪದಗಳು, ಸುಗ್ಗಿಯ ಪದಗಳನ್ನುಕಲಿತು, ಈಗ ಕಿರಿಯರಿಗೆ ಕಲಿಸುವುದರ ಮೂಲಕ ಈ ಗೀತ ಸಂಪ್ರದಾಯವನ್ನು ಉಳಿಸುತ್ತಿದ್ದಾರೆ. ಹಣಬೆಯ ಸುತ್ತಮುತ್ತ ಯಾರ ಮನೆಯಲ್ಲಿ ಮದುವೆಯಾಗಲೀ, ಮೈನೆರೆಯಲಿ, ಪುಟ್ಟತಾಯಮ್ಮನ ಸೋಬಾನೆ ಇರಲೇಬೇಕು. ಅಲ್ಲದೆ ದೊಡ್ಡಬಳ್ಳಾಪುರದಲ್ಲಾಗುವ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಈಕೆ ಕಾಯಂ ಹಾಡುಗಾರ್ತಿ, ಹಿಮ್ಮೇಳದ ಸಹಗಾಯಕಿಯರ ಜೊತೆ ಪುಟ್ಟತಾಯಮ್ಮ ಹಾಡಲು ನಿಂತರೆ ಅದ್ಭುತವಾದ ಒಂದು ನಾದಲೋಕ ಸೃಷ್ಟಿಯಾಗುತ್ತದೆ. ಜನಪದ ಗೀತೆಯ ಎಲ್ಲ ಸಂಪ್ರದಾಯದ ಹಾಡುಗಳನ್ನೂ ಇವರು ಬಲ್ಲವರಾದ್ದರಿಂದ ಜಾನಪದ ಸರಸ್ವತೀ ಎಂಬ ಬಿರುದಿಗೆ ಅರ್ಹರಾಗಿದ್ದಾರೆ.

ಬಹುಪಾಲು ಜನಪದ ಕಲೆಗಳಿರುವುದು ದಲಿತರಲ್ಲಿ ಸದಾ ಶ್ರಮಜೀವಿಗಳೇ ಅವರಾಗಿರುವುದರಿಂದ ಕಲೆಗಳು ಸಹಜವಾಗಿ ಅವರಲ್ಲಿ ಮೈಗೂಡಿರುತ್ತವೆ. ಯಾವುದೇ ಶುಭ ಸಂದರ್ಭವಾಗಲಿ ಅಲ್ಲಿ ಹಾಡುಗಾರರು ಹಾಜರಿರುತ್ತಾರೆ. ತಮ್ಮ ಸಿರಿಕಂಠವನ್ನು ಮೊಳಗಿಸುತ್ತಾರೆ. ಪುಟ್ಟತಾಯಮ್ಮ ಅಂಥ ಪ್ರತಿಭಾವಂತ ಕಲಾವಿದೆ. ಆಕೆಗೆ ತಿಳಿಯದ ಪದ ಸಂಪತ್ತಿಲ್ಲ.

ಶ್ರೀ ಆಸಾದಿ ಹನುಮಂತಪ್ಪ

ಊರಜನರೆಲ್ಲಾ ಪ್ರೀತಿಯಿಂದ 'ಆಸಾದಿ ಮಾರಣ್ಣ' ಎಂದೇ ಕರೆಯುವ ಎಪ್ಪತ್ತೈದು ವರ್ಷದ ಹನುಮಂತಪ್ಪ ಮಾರಿ ಜಾತ್ರೆಗಳ ಅವಿಭಾಜ್ಯ ಅಂಗ. ಎಲ್ಲೇ ಮಾರಿ ಜಾತ್ರೆನಡೆಯುತ್ತಿರಲಿ ಅಲ್ಲಿ ಕೆಂಪು ಪೇಟ, ಮಾಸಲು ಬಿಳಿ ಪಂಚೆ ಕೈಯಲ್ಲಿಹಲಗೆ ಹಿಡಿದಿರುವ ವ್ಯಕ್ತಿಯಿದ್ದರೆ ಅವರೇ ಹನುಮಂತಪ್ಪ ಎಂಬಂತೆ ಮನೆ ಮಾತಾಗಿದ್ದಾರೆ. ಅವರ ಹಲಗೆಯ ಕಣಿಕಣಿ ನಾದಕ್ಕೆ ಕಂಚಿನ ಕಂಠಕ್ಕೆ ಮಾರಮ್ಮನೂ ತಲೆದೂಗುತ್ತಾಳೆ.

ಚಿಕ್ಕಮಗಳೂರು ಜಿಲ್ಲೆಯ ಅಂತರಗಟ್ಟಮ್ಮನ ಪೂಜಾರಿಯಾದ ಈ ಹನುಮಂತಪ್ಪ ಚಿಕ್ಕ ವಯಸ್ಸಿನಿಂದ ದೇವರ ಸೇವೆಯಲ್ಲೇ ಸವೆದಿದ್ದಾರೆ. ಆಸಾದಿ ತ್ರಿಪದಿಗಳನ್ನು ನೆರೆದ ಜನಸ್ತೋಮವೆಲ್ಲ ಸವಿಯುವಂತೆ ಹಾಡಿದ್ದಾರೆ. ನೂರಾರು ಆಸಾದಿಗಳಿಗೆ ದೀಕ್ಷೆ ಕೊಡಿಸಿದ್ದಾರೆ. ಇವರು ಹಾಡುವ ಎಲ್ಲಹಾಡುಗಳನ್ನು 'ಆಸಾದಿ ಸಂಪ್ರದಾಯದ ಹಾಡುಗಳು' ಎಂಬ ಹೆಸರಿನಲ್ಲಿ ಶ್ರೀನೆಲ್ಲಿಸ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.

ಹೆಣ್ಣು ದೇವತೆಯ ಹೊಗಳುಭಟ್ಟ ಆಸಾದಿ. ಮಾರಿ ದೇವಸ್ಥಾನಗಳಿರುವ ಸ್ಥಳಗಳಲ್ಲಿ ಕಂಡುಬರುವ ಈ ಸಂಪ್ರದಾಯ ಆದಿ ಕರ್ನಾಟಕದಲ್ಲಿ ಹೆಚ್ಚು. ಈ ಕಲೆಯಲ್ಲಿ ಹಾಡು ಮತ್ತು ವಾದ್ಯಗಳು ಪ್ರಧಾನ. ಹೆಣ್ಣು ದೇವತೆಯ ತೇರು ಉತ್ಸವಗಳಲ್ಲಿದೇವತೆಯ ಮುಂದೆ ಅತ್ಯಂತ ಹತ್ತಿರದಲ್ಲಿಆಸಾದಿ ಇರಲೇಬೇಕು. ಮಾರಿಯ ಮಹಿಮೆಯನ್ನು ಕೊಂಡಾಡುತ್ತ, ಆಕೆಯ ಸಾಹಸವನ್ನು ವರ್ಣಿಸುವ ಆಸಾದಿ ಹಾಡಿನ ಸಾಹಿತ್ಯ ತುಂಬ ಸೊಗಸಾಗಿರುತ್ತದೆ ಹನುಮಂತಪ್ಪನಿಗೂ ಈ ಮಾತು ಅನ್ವಯವಾಗುತ್ತದೆ.

ಶ್ರೀ ಈಶ್ವರಪ್ಪ ಗುರಪ್ಪ ಅಂಗಡಿ

ಗದ್ಪನಕೇರಿಯ ಈಶ್ವರಪ್ಪ ಗುರಪ್ಪ ಅಂಗಡಿಯವರು ಆರುವರ್ಷದ ಬಾಲಕನಾಗಿದ್ದಾಗಲೇ ವಂಶಪಾರಂಪರ್ಯವಾಗಿ ಬಂದ ಕಲೆಯನ್ನು ಆಸಕ್ತಿಯಿಂದ ಕಲಿತರು. ಕೆಲವೇ ದಿವಸಗಳಲ್ಲಿ ಪ್ರತಿಷ್ಠಿತ ಜನರ ಮುಂದೆ ಪ್ರದರ್ಶನ ನೀಡಿ ಶಭಾಶ್‌ಗಿರಿ ಪಡೆದರು. ಅಲ್ಲಿಂದ ಈ ಕಲಾವಿದ ಹಿಂತಿರುಗಿ ನೋಡಿದವರೇ ಅಲ್ಲ.

ಕುತನಿ ನಿಲುವಂಗಿ, ಕುತನಿಕಾಶಿ, ಕಾಲಿಗೆ ಗೆಜ್ಜೆ, ತಲೆಗೆ ರೇಶ್ಮೆ ಪಟಗಾ ತೊಟ್ಟು ಕೈಯಲ್ಲಿ ಖಡ್ಗ ಹಿಡಿದು ನಿಂತರೆ ಅಂಗಡಿಯವರು ಥೇಟ್ ಈಶ್ವರನೇ ಆಗಿಬಿಡುತ್ತಾರೆ. ಕುಡಿತದ ಬಗ್ಗೆ, ಭಾವೈಕ್ಯತೆ ಬಗ್ಗೆ, ಸಾಕ್ಷರತೆ ಬಗ್ಗೆ ತಾವೇ ರಚಿಸಿದ ಲಾವಣಿಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹಾಡುತ್ತ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ.

ನೂರಕ್ಕೂ ಹೆಚ್ಚು ಜನಪದ ಗೀತೆಗಳನ್ನು ಹಾಗೂ ಐವತ್ತಕ್ಕೂ ಹೆಚ್ಚು ಜನಪದ ಪೌರಾಣಿಕ ಕಥೆಗಳನ್ನು ಹೇಳುವ ಇವರು ಧಾರವಾಡದ ಆಕಾಶವಾಣಿ ಕೇಂದ್ರದಿಂದ ಹಲವಾರು ಬಾರಿ ಕಾರ್ಯಕ್ರಮ ನೀಡಿದ್ದಾರೆ.

ಶ್ರೀ ರಾಮಪ್ಪ ಭೀಮಪ್ಪ ಕಿಳ್ಳೇಕ್ಯಾತರ

ತೊಗಲು ಗೊಂಬೆಯಾಟದ ರಾಮಪ್ಪ ವಂಶಪಾರಂಪರ್ಯವಾಗಿ ಬಂದ ಈ ಕಲೆಯ ಸೆಳತಕ್ಕೆ ಬಾಲ್ಯದಲ್ಲಿಯೇ ಸಿಕ್ಕಿಕೊಂಡರು. ತಂದೆ ಆಟದ ಪ್ರದರ್ಶನ ಕೊಡುವಾಗ ಹಾಡುವುದು, ಡೋಲ್ ಬಾರಿಸುವುದು, ಮಕ್ಕಳಗೊಂಬೆ ಕುಣಿಸುವುದರಲ್ಲಿ ತರಬೇತಿ ಪಡೆಯುತ್ತಲೇ ಬೆಳೆದ ಈ ಕಲಾವಿದ ಇಂದು ಬೇರೆಯವರಿಗೆ ತರಬೇತಿ ಕೊಡುವಷ್ಟು ಪ್ರಬುದ್ಧರಾಗಿದ್ದಾರೆ. ರಾಯಚೂರು ಜಿಲ್ಲೆಯ ನೀರಲಗಿ, ಉತ್ನೂರು, ಅನುಕಂಟೆ ತಿಗರಿ, ನೆಲುಗಿ, ಅಲುವಾಗಿಲಿ, ಕ್ಯಾಸಲಾಪುರ, ಹೆಸರೂರು, ತಕ್ಕೂರುಗಳಲ್ಲಿ ವರ್ಷಕ್ಕೊಮ್ಮೆ ಆಟವನ್ನು ಕಡ್ಡಾಯವಾಗಿ ಪ್ರದರ್ಶಿಸುತ್ತಲೇ ಬೇರೆ ಕಡೆಯೂ ಪ್ರದರ್ಶಿಸಿ ಪ್ರಖ್ಯಾತರಾಗಿದ್ದಾರೆ. ರಾಮಾಯಣ, ಮಹಾಭಾರತದ ಕಥೆಗಳನ್ನು ನಿರರ್ಗಳವಾಗಿ ಹಾಡುತ್ತಾ, ಆಡುತ್ತಾ ಪರದೆಯ ಮೇಲೆ ತಮ್ಮ ನಾಜೂಕು ಶೈಲಿಯಿಂದ ಮಾಯಾ ಲೋಕವನ್ನೇ ಸೃಷ್ಟಿಸುತ್ತಾರೆ. ವಂಶಪಾರಂಪರ್ಯವಾಗಿ ಬಂದ ಅಪೂರ್ವ ತೊಗಲು ಗೊಂಬೆಗಳನ್ನು ಕುಣಿಸಿ ವರ್ಣಮಯ ಪ್ರಪಂಚವನ್ನು ಸೃಷ್ಟಿಸುವುದರಲ್ಲಿ ಇವರು ಹೇಗೆ ನಿಷ್ಣಾತರೋ, ಕಥಾ ನಿರೂಪಣೆಯಲ್ಲಿಯೂ ಅಷ್ಟೇ ಪ್ರತಿಭಾವಂತರು.

ಶ್ರೀ ಎ. ಎಂ. ಹಾಲಯ್ಯ

ಅರವತ್ತರ ಇಳಿವಯಸ್ಸಿನಲ್ಲಿರುವ ಹಸನ್ಮುಖಿ ಹಾಲಯ್ಯನವರು ತೀರ ಬಡತನದ ಕುಟುಂಬದಲ್ಲಿ ಜನಿಸಿದ್ದರೂ ಹಾಲಿನಂಥ ಮನಸ್ಸಿನ ವ್ಯಕ್ತಿ. ತಂಬೂರಿ ಪದಗಳನ್ನು ಭಜನೆ ಪದಗಳನ್ನು ಚಿಕ್ಕಂದಿನಲ್ಲಿ ಹಾಡುತ್ತಾ ಬೆಳೆದ ಈ ಕಲಾವಿದ ಎಚ್. ಎಂ. ಬಸಪ್ಪಯ್ಯ ಗವಾಯಿಗಳಿಂದ ಸ್ವಲ್ಪ ಮಟ್ಟಿಗೆ ಸಂಗೀತ ಕಲಿತರು. ಜೊತೆಗೆ ಸ್ವತಃ ಜ್ಯೋತಿಷ್ಯ ಅಭ್ಯಾಸ ಮಾಡಿದರು. ಸೋಗಿ ಗ್ರಾಮದ ದೊಡ್ಡಾಟದ ಉಜ್ಜನಿ ಸಿದ್ಧವೀರಪ್ಪನವರಿಂದ ತರಬೇತಿ ಪಡೆದು ಈಗ ದೊಡ್ಡಾಟದ ಭಾಗವತರಾಗಿದ್ದಾರೆ.

ತಮ್ಮದೇ ಆದ ಶ್ರೀ ವೀರೇಶ್ವರ ಜಾನಪದ ದೊಡ್ಡಾಟದ ಸಂಘವನ್ನುಸ್ಥಾಪಿಸಿ ಅನೇಕ ಯುವಕರಿಗೆ ದೊಡ್ಡಾಟದ ತರಬೇತಿಯನ್ನು ಕೊಡುತ್ತಿದ್ದಾರೆ. ತಲೆಗೆ ರುಮಾಲು ಸುತ್ತಿ ಕೈಯಲ್ಲಿ ತಾಳ ಹಿಡಿದು ಹಾಲಯ್ಯನವರು ನಿಂತರೆ ಸಾಕು ಅವರ ಕಂಚಿನ ಕಂಠಕ್ಕೆ ಮನಸೋತು ದೂರದೂರುಗಳಿಂದ ಪ್ರೇಕ್ಷಕರು ಓಡೋಡಿ ಬರುತ್ತಾರೆ. ಇಂಥ ಕಂಚಿನ ಕಂಠದ ದೊಡ್ಡಾಟದ ಭಾಗವತರು ಪ್ರೋತ್ಸಾಹವಿಲ್ಲದೆ ಪುರಸ್ಕಾರವಿಲ್ಲದೆ ತೆರೆಮರೆಯಲ್ಲೇ ಉಳಿದುಹೋಗಿರುವುದು ಒಂದು ದುರಂತ.

ಪ್ರಶಸ್ತಿ ವಿಜೇತರ ವಿಳಾಸ ಪಟ್ಟಿ

1 ಡಾ. ಎಸ್.ಕೆ. ಕರೀಂಖಾನ್, ಬೆಂಗಳೂರು

2. ಡಾ. ಚಂದ್ರಶೇಖರ ಕಂಬಾರ, ಕೆಂಗೇರಿ ಉಪನಗರ, ಬೆಂಗಳೂರು

3. ಮುದೇನೂರು ಸಂಗಣ್ಣ, ಚಿಗಟೇರಿ, ಹರಪನಹಳ್ಳಿ ತಾ॥ ಬಳ್ಳಾರಿ ಜಿಲ್ಲೆ

4. ನೀಲಗಾರಿ ಪುಟ್ಟಮಾದಯ್ಯ, ಕೇರ್‌ಆಫ್ ಸ್ವಾಮಿ, ಗೋಪಾಲಪುರ ಬಡಾವಣೆ, ಟಿ. ನರಸೀಪುರ ಟೌನ್, ಮೈಸೂರು ಜಿಲ್ಲೆ.

5. ಕುರುಬರ ಹೊನ್ನ, ಕಾವಡಿ ಗ್ರಾಮ, ಅಮ್ಮತೀ ಅಂಚೆ-571 211, ಕೊಡಗು ಜಿಲ್ಲೆ

6. ಅಗರಿ ಶ್ರೀನಿವಾಸ ಭಾಗವತರು, ಅಂಚೆ - ಸಿಬ್ಬಿಕೆರೆ, ಗಂಜೀಮಠ ಮಾರ್ಗ, ಮಂಗಳೂರು ತಾ॥, ದಕ್ಷಿಣ ಕನ್ನಡ ಜಿಲ್ಲೆ

7. ವೀರಭದ್ರ ಮಂಜುನಾಥ ಭಂಡಾರಿ, ಭಂಡಾರಿ, ಕರ್ಕಿ ಅಂಚೆ, ಹೊನ್ನಾವರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ

8. ಶ್ರೀಮತಿ ನಾಗಮ್ಮ ದಿ॥ ಗುಂಡಯ್ಯಸ್ವಾಮಿ, ಆಳಂದಿ ಅಂಚೆ, ಭಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ

9. ಶ್ರೀಮತಿ ಗೊರ್ಲಕಟ್ಟೆಹನುಮಜ್ಜಿ, ಗೊರ್ಲಕಟ್ಟೆ, ನನ್ನಿವಾಳದ ಹತ್ತಿರ, ಚಳ್ಳಕೆರೆ ತಾ॥, ಚಿತ್ರದುರ್ಗಜಿಲ್ಲೆ

10. ಕುಂಞರಾಮ ಮಣಿಮಾಣಿ, ಯಕ್ಷಗಾನ ಕಲಾವಿದ, ಮಣಿಮಾಣಿ ಕಾಟುಕುಕ್ಕೆ ಅಂಚೆ, ಕಾಸರಗೋಡು ಜಿಲ್ಲೆ

11. ಬಸಯ್ಯ ಜಿ. ಸಮಾಳದ, ಸಾಕೀನ್ ಅಬ್ಬಿಗೇರಿ, ರೋಣ ತಾಲ್ಲೂಕು, ಧಾರವಾಡ ಜಿಲ್ಲೆ

12. ಶ್ರೀಮತಿ ನಂಜಮ್ಮ ಕೋಂ ಲೇ॥ ವೆಂಕಟಪ್ಪ, ಕಿರಂಗೂರು ಬೆಕ್ಕಳಲೆ ಅಂಚೆ, ಕೊಪ್ಪ ಹೋಬಳಿ, ಮದ್ದೂರು ತಾ॥, ಮಂಡ್ಯ ಜಿಲ್ಲೆ

13. ತಳಾರಿ ಗಂಗಪ್ಪ, ತೊರೆದೇವಂಡಹಳ್ಳಿ ಸ್ಥಳ ಮತ್ತು ಅಂಚೆ, ಕೋಲಾರ ತಾ॥

14. ಜಿ.ಆರ್. ಚಿಕ್ಕಮುದ್ದಯ್ಯ, ಗೋಪಗೊಂಡನ ಹಳ್ಳಿ, ಬಿಜವಾರ ಅಂಚೆ, ಮಧುಗಿರಿ ತಾ॥, ತುಮಕೂರು ಜಿಲ್ಲೆ

15. ಸಿದ್ದಪ್ಪ ಬೇಲಪ್ಪ ಸವದತ್ತಿ, ಕಾಡಾಪೂರ ಅಂಚೆ, ಚಿಕ್ಕೋಡಿ ತಾ॥, ಬೆಳಗಾವಿ ಜಿಲ್ಲೆ

16. ಗುರಣ್ಣ ಮಾರ್ತಾಂಡಪ್ಪ ಹಡಪದ, ದೊಡ್ಡ ಸಾಗರ ಅಂಚೆ ಮತ್ತು ಸ್ಥಳ, ಶಹಾಪೂರ ತಾ॥, ಗುಲ್ಬರ್ಗ ಜಿಲ್ಲೆ

17. ಜೋಗಿ ಬೂದ್ಯಪ್ಪ, ಹೊಸೂರು ಸ್ಥಳ ಮತ್ತು ಅಂಚೆ, ಆನಂದಪುರ ಹೋಬಳಿ, ಸಾಗರ ತಾ॥, ಶಿವಮೊಗ್ಗ ಜಿಲ್ಲೆ.

18. ಅಗಸರಮುದ್ದಣ್ಣ, ಮಳಲಿ ಅಂಚೆ ಮತ್ತು ಸ್ಥಳ, ಹೊಳೆನರಸೀಪುರ ತಾ॥, ಹಾಸನ ಜಿಲ್ಲೆ

19. ಶ್ರೀಮತಿ ಪುಟ್ಟತಾಯಮ್ಮ, ಹಣಬೆ ಸ್ಥಳ ಮತ್ತು ಅಂಚೆ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾ. ಜಿಲ್ಲೆ.

20. ಆಸಾದಿ ಹನುಮಂತಪ್ಪ, ಆಡಿಗೆರೆ ಲೋಕೇಶ್, ಆಡಿಗೆರೆ ಗಿರಿಯಪುರ ಅಂಚೆ, ಕಡೂರು ತಾ॥, ಚಿಕ್ಕಮಗಳೂರು ಜಿಲ್ಲೆ

21. ಈಶ್ವರಪ್ಪ ಗುರಪ್ಪ ಅಂಗಡಿ, ಗದ್ದನ ಕೇರಿ ಅಂಚೆ 587 102, ಬಾಗಲಕೋಟೆ ತಾ॥, ಬಿಜಾಪುರ ಜಿಲ್ಲೆ

22. ರಾಮಪ್ಪ ಭೀಮಪ್ಪ ಕಳ್ಳೆಕ್ಯಾತವ, ಹನಕುಂಟೆ ಸ್ಥಳ ಮತ್ತು ಅಂಚೆ, ಕೊಪ್ಪಳ ತಾ॥, ರಾಯಚೂರು ಜಿಲ್ಲೆ

23. ಎ.ಎಂ. ಹಾಲಯ್ಯ, ಸೋಗಿ ಸ್ಥಳ ಮತ್ತು ಅಂಚೆ, ಹಡಗಲಿ ತಾಲ್ಲೂಕು, ಬಳ್ಳಾರಿ ಜಿಲ್ಲೆ